ಕಂದಾಯ ಇಲಾಖೆ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ.ಪಹಣಿ/ವಿವಾದ/77/2014-15 ದಿನಾಂಕ:

ವಾದಿಗಳು
1. ಶ್ರೀ ಗಂಗಮ್ಮ 2)ನಿಂಗಪ್ಪ 3)ಹೊನ್ನಪ್ಪ
4.ಶ್ರೀಮತಿಬಸಮ್ಮ ಗಂಡ ಲೇಟ್ ರಾಮಚದ್ರಪ್ಪ
5.ಶ್ರೀ ರಾಮಪ್ಪ ತಂದೆ ಲೇಟ್ ಸಿದ್ದಪ್ಪ
6.ಶ್ರೀ ಲಕ್ಷ್ಮಪ್ಪ ತಂದೆ ಸಿದ್ದಪ್ಪ

ಪ್ರತಿವಾದಿಗಳು
1 ಕಂದಾಯ ನೀರೀಕ್ಷಕರು ಹೂವಿನಹಡಗಲಿ

ವಾದಗ್ರಸ್ತ ಜಮೀನಿನ ವಿವರ

| ಕ್ರಮ ಸಂಖ್ಯೆ | ಸರ್ವೇ ನಂಬರ | ವಿಸ್ತೀರ್ಣ | ಗ್ರಾಮದ ಹೆಸರು |
|---|---|---|---|
| 1 | 71/ಬಿ/1 | 2.74 | ದೇವಗೊಂಡನಹಳ್ಳಿ |

ಪೀಠಿಕೆ,

ಹಡಗಲಿ ತಾಲೂಕಿನ ದೇವಗೊಂಡನಹಳ್ಳಿ ಗ್ರಾಮದ ಸರ್ವೆ ನಂ 71/ಬಿ/1ವಿಸ್ತೀರ್ಣ 2.74 ಎಕರೆ ಜಮೀನನ್ನು ನೊಂದಾಯಿತ ವಲ್ಲದ ಪಾಲು ವಿಭಾಗ ಪತ್ರ ದಿನಾಂಕ:14.08.2013 ಮೇರೆಗೆ ವಾದಿಗಳು ಇವರು ವಂಶವೃಕ್ಷ ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸಿ 4.ಬಸಮ್ಮ ಗಂಡ ಲೇಟ್ ರಾಮಚದ್ರಪ್ಪ 5.ಶ್ರೀ ರಾಮಪ್ಪ ತಂದೆ ಲೇಟ್ ಸಿದ್ದಪ್ಪ 6.ಶ್ರೀ ಲಕ್ಷ್ಮಪ್ಪ ತಂದೆ ಸಿದ್ದಪ್ಪ ಹೆಸರಿಗೆ ಪಾಲುವಿಭಾಗದ ಪ್ರಕಾರ ಪಟ್ಟಾ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿದ ಮೇರೆಗೆ ಹಕ್ಕು ಬದಲಾವಣೆ ಸಂಖ್ಯೆ ಹೆಚ್ 12/2013-14 ರಲ್ಲಿ ನೊಂದಾಯಿಸಿಕೊಂಡು ಹಿತಾಸಕ್ತರಿಗೆ ನಮೂನೆ 21 ರಲ್ಲಿ ನೋಟೀಸ್ ಜಾರಿ ಮಾಡಲು ಕ್ರಮ ಜರುಗಿಸಿಲಾಗಿದ್ದು ಗ್ರಾಮಲೆಕ್ಕಾಧಿಕಾರಿಗಳು ವಂಶವೃಕ್ಷವು ತಪ್ಪಾಗಿ ಹಾಕಿಸಿ ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಕಾರಣ ಕಂದಾಯ ನೀರೀಕ್ಷಕರು ಹೂವಿನಹಡಗಲಿ ಇವರು ಪ್ರಕರಣವನ್ನು ವಿವಾದಾಸ್ಪದ ವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಪ್ರಕಾರ ಪ್ರಕಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 129 ರಡಿಯಲ್ಲಿ ವಿಚಾರಣೆಗೆ ತೆಗೆದುಕೊಳ್ಳಲು ದಾಖಲೆಗಳನ್ನು ಪರಿಶೀಲಿಸಿಲಾಗಿ ಪಾಲು ವಿಭಾಗ ಪತ್ರವು ನೊಂದಾಯಿತವಲ್ಲದ ಕಾರಣ ವಿಚಾರಣೆ ತೆಗೆದುಕೊಳ್ಳದೇ ಪ್ರಕರಣದಲ್ಲಿ ವಿಳಂಬವಾದ ಕಾರಣ ಸರ್ಕಾರಿ ಆದೇಶ ಸಂಖ್ಯೆ ಆರ್ ಡಿ /11/ಟಿಆರ ಎಂ/2008 ದಿನಾಂಕ 03.12.2010 ಅನ್ವಯ ನೊಂದಾಯಿತ ವಲ್ಲದ ದಸ್ತಾವೇಜುಗಳನ್ನು ಪರಿಗಣಿಸಬಾರದೆಂಬ ನಿರ್ದೇಶನ ಇರುವ ಕಾರಣ, ಈ ಕೆಳಕಂಡ

:-ಆದೇಶ-:

ಪ್ರಕರಣದ ವಾಸ್ತವಾಂಶ, ಹಿನ್ನೆಲೆ ಹಾಗೂ ದಾಖಲೆಗಳ ಮೇರೆಗೆ ವಾದಿಗಳು ನೊಂದಾಯಿತ ವಲ್ಲದ ಪಾಲು ವಿಭಾಗ ಪತ್ರವನ್ನು ಸಲ್ಲಿಸಿರುವುದರಿಂದ, ವಾದಿಗಳು ನೊಂದಯಿತ ಪಾಲುವಿಭಾಗವನ್ನು ಸಲ್ಲಿಸಲು ನಿರ್ದೇಶಿಸುತ್ತಾ ದೇವಗೊಂಡನಹಳ್ಳಿ ಗ್ರಾಮದ ಸರ್ವೆ ನಂ 71/ಬಿ/1ವಿಸ್ತೀರ್ಣ 2.74 ಎಕರೆ ಜಮೀನಿನ ಬಗ್ಗೆ ಮರು ಅರ್ಜಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಆದೇಶಿಸುತ್ತಾ, ಪ್ರಕರಣವನ್ನು ವಿಲೇ ಗೋಳಿಸಲಾಗಿದೆ.

ಈ ಆದೇಶವನ್ನು ದಿನಾಂಕ: 07.2016 ರಂದು ತೆರದ ನ್ಯಾಯಲಯದ್ಲಿ ಗೋಶಿಸಲಾಗಿದೆ

ತಹಶೀಲ್ದಾರರು
ಹಡಗಲಿ

ಪ್ರತಿಯನ್ನು:
1. 1. ಶ್ರೀ ಗಂಗಮ್ಮ 2)ನಿಂಗಪ್ಪ 3)ಹೊನ್ನಪ್ಪ
2. 4.ಬಸಮ್ಮ ಗಂಡ ಲೇಟ್ ರಾಮಚದ್ರಪ್ಪ
3. 5.ಶ್ರೀ ರಾಮಪ್ಪ ತಂದೆ ಲೇಟ್ ಸಿದ್ದಪ್ಪ
4. 6.ಶ್ರೀ ಲಕ್ಷ್ಮಪ್ಪ ತಂದೆ ಸಿದ್ದಪ್ಪ